# ಭಾಗೀಚಿಕ್ಕಿ



ಐಸ್ ಪ್ಯಾಕಿನಂತೆ ತಣ್ಣಗೆ ಕೊರೆಯುತ್ತಿದ್ದ ಆ ಮನೆಯಲ್ಲಿ ರಗಳೆ ರಂಪ ಅಂತೆಲ್ಲ ಶುರವಾಗಿದ್ದು ಭಾಗೀಚಿಕ್ಕಿ ತನ್ನ ಕೈಯ್ಯಲ್ಲಿ ದೊಡ್ಡದೊಂದು ಗಂಟನ್ನು ಹಿಡಿದುಕೊಂಡು ಮನೆಗೆ ಕಾಲಿಟ್ಟ ನಂತರವಷ್ಟೇ. ಆವರೆಗೂ ಆ ಮನೆಯಲ್ಲಿದ್ದ ಮೂರು ಜನ ದೊಡ್ಡವರು ಮತ್ತು ಒಂದು ಪುಟ್ಟ ಮಗುವಿಗೂ ಗಲಾಟೆ ಎಂದರೇನು ಅನ್ನುವ ಶಬ್ದದ ತಾರ್ಕಿಕ ಅನುಭವವೇ ಆಗಿರಲಿಲ್ಲ. ಹಾಗಂತ ಭಾಗೀಚಿಕ್ಕಿ ಏನು ಏಕಾಏಕಿ ಆ ಮನೆಗೆ ಬಂದಿದ್ದಲ್ಲ. ಬರಬೇಕು ಅನ್ನುವ ಆಸಕ್ತಿಯೂ ಆಕೆಗೆ ಇರಲಿಲ್ಲ. ಆದರೆ ಆ ಮನೆಯ ಶಾರದಾ ಎನ್ನುವ ಅವಳ ಬಾಯಿ ಮಾತಿನ ಅಕ್ಕನ ಮಗಳು ಪದೇ ಪದೇ ಬಂದು 'ಸಂಜೆಗೆಂಪು' ವೃದ್ಧಾಶ್ರಮದ ಬಾಗಿಲಲ್ಲಿ ನಿಂತು, 'ಚಿಕ್ಕಿ ಇಲ್ಲ ಅನ್ನಬೇಡವೇ' ಎಂದು ಗೋಗರೆದಿದ್ದರಿಂದ. ಅವಳಿಗೆ ಅಲ್ಲಿಂದ ಹೊರಡದೇ ವಿಧಿ ಇರಲಿಲ್ಲ. 'ಪಾಪ ಮಗು ಬಂದು ಕರೀತಿದೆ ಹೋಗದಿದ್ದರೆ ಋಣ ಹರಿಯುವುದಿಲ್ಲ' ಎನ್ನುತ್ತ ತನ್ನ ಸಾಮಾನು ಸರಂಜಾಮು ಕಟ್ಟಿಕೊಂಡು ಬಂದಿದ್ದಳು

ಅಂದ ಹಾಗೆ ಈ ಭಾಗೀಚಿಕ್ಕಿಗೂ ಶಾರದೆಗೂ ಲೌಕಿಕದಲ್ಲಿ ಹುಟ್ಟಿಕೊಂಡಿರಬಹುದಾದ ಯಾವ ಸಂಬಂಧವೂ ಇರಲಿಲ್ಲ. ಕೇವಲ ಬಾಯಿ ಮಾತಿನ ನಂಟಷ್ಟೇ. ಆದರೆ ಶಾರದೆಗೆ ಬುದ್ಧಿ ತಿಳಿದಾಗಿನಿಂದ ಅವಳು ಅಂದರೆ ಭಾಗೀಚಿಕ್ಕಿ ಶಾರದೆಯ ಅಜ್ಜನ ಮನೆಯಲ್ಲೇ ಇದ್ದವಳು. ಅವಳು ಯಾರು ಏನು ಏನೊಂದು ಯಾರಿಗೂ ಗೊತ್ತಿರಲಿಲ್ಲ. ಅದಕ್ಕೆ